

# ಮುಂಬೈ–ಗೋವಾ ನಡುವೆ ‘ಲೈನರ್ ಆ್ಯಂಗ್ರಿಯಾ’ ಭಾರತಕ್ಕೂ ಬಂತು ಕ್ರೂಸ್!



ಕ್ರೂಸ್ ಪಯಣ ಈ ಹೊತ್ತಿನ ಪ್ರವಾಸೋದ್ಯಮದ ಆಕರ್ಷಣೆಗಳಲ್ಲೊಂದು. ನೀರಿನಲ್ಲಿ ತೇಲುತ್ತಾ ಐಷಾರಾಮಿ ಜಗತ್ತಿನ ಅನುಭವ ನೀಡುವ ಕ್ರೂಸ್ ಪ್ರವಾಸ, ಈವರೆಗೆ ವಿದೇಶ ಪ್ರವಾಸದ ಆಕರ್ಷಣೆಗಳ ಒಂದು ಭಾಗವಾಗಿತ್ತು. ಈಗ ‘ಲೈನರ್ ಆ್ಯಂಗ್ರಿಯಾ’ ಮೂಲಕ ಭಾರತದಲ್ಲೂ ಐಷಾರಾಮಿ ಪ್ರವಾಸೋದ್ಯಮದ ಕವಲು ಹಬ್ಬಿಕೊಂಡಿದೆ.

■ ಸಂತೋಷ್ ರಾವ್ ಪೆರ್ಮುಡ

ಸಮುದ್ರ ಕಿನಾರೆಯಲ್ಲಿ ಸಂಜೆಯ ಇಳಿ ಹೊತ್ತಿನಲ್ಲಿ ಆಟವಾಡುವುದು ಮತ್ತು ನಡೆದಾಡುವುದು ಎಲ್ಲರಿಗೂ ಅಚ್ಚುಮೆಚ್ಚು. ಆಳ ಸಮುದ್ರದಲ್ಲಿ ಪ್ರಯಾಣ ಮಾಡುವುದೆಂದರೆ ಅದೊಂದು ಸಾಹಸಗಾಥೆಯೇ ಸರಿ. ಇಂಥ ಆಳ ಸಮುದ್ರದ ಅನುಭವ ಕ್ರೂಸ್ ಪ್ರವಾಸದಲ್ಲಿ ಲಭ್ಯ.

ಕ್ರೂಸ್ ಪ್ರವಾಸ ಮೋಜು ಮನರಂಜನೆಗೆ ಹೆಸರಾದುದು. ಐಷಾರಾಮಕ್ಕೆ ಹೆಸರಾದ ಈ ಸಮುದ್ರಯಾನ ದುಬಾರಿಯೂ ಹೌದು. ವಿದೇಶ ಪ್ರವಾಸಗಳ ಪ್ಯಾಕೇಜ್‌ಗಳಲ್ಲಿ ಆಕರ್ಷಣೆಯ ಐಟಂ ಆಗಿರುವ ಕ್ರೂಸ್ ಯಾನ ಈಗ ಭಾರತಕ್ಕೂ ಬಂದಿದೆ. ಭಾರತದ ಪ್ರಪ್ರಥಮ ದೇಶೀಯ ಐಷಾರಾಮಿ